**ಸಾಕ್ಷಿಗೆ ದಿನಾಂಕ *04-03-2025* ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಪಿ. ಆರ್. ಪಿ. ವಕೀಲರಿಂದಃ**

ನಾನು ಈ ದಿನ ನನ್ನ ಹೆಚ್ಚುವರಿ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಸಂಗತಿಗಳು ನಿಜ ಇದ್ದು, ನಾನೇ ಹೇಳಿ ಬರೆಸಿದ್ದು, ಅದರಲ್ಲಿನ ಪ್ರಮಾಣ ಕರ್ತನ ಸಹಿಗಳು ನನ್ನದೇ ಇರುತ್ತವೆ.

ನಾನು ಈ ಕೆಳಕಂಡ ದಾಖಲೆಗಳನ್ನು ಗುರುತಿಸುತ್ತೇನೆ.

ನಿಪಿ -16 ಃ ಎಮ್ ಇ ನಂ.840 ಇದರ ದೃಢೀಕೃತ ಪ್ರತಿ

ನಿಪಿ -17 ಃ ಎಮ್ ಇ ನಂ.1800 ಇದರ ದೃಢೀಕೃತ ಪ್ರತಿ

ನಿಪಿ -18 ಃ ಎಮ್ ಇ ನಂ.1795 ಇದರ ದೃಢೀಕೃತ ಪ್ರತಿ

ನಿಪಿ -19 ಃ ಎಮ್ ಇ ನಂ.1832 ಇದರ ದೃಢೀಕೃತ ಪ್ರತಿ

ನಿಪಿ -20 ಃ ಎಮ್ ಇ ನಂ.3299 ಇದರ ದೃಢೀಕೃತ ಪ್ರತಿ

ನಿಪಿ -21 ಃ ಎಮ್ ಇ ನಂ.519 ದೃಢೀಕೃತ ಪ್ರತಿ

ನಿಪಿ -22 ಃ ಎಮ್ ಇ ನಂ.548 ದೃಢೀಕೃತ ಪ್ರತಿ

ನಿಪಿ -23 ಃ ಎಮ್ ಇ ನಂ.635 ದೃಢೀಕೃತ ಪ್ರತಿ

ನಿಪಿ -24 ಃ ಎಮ್ ಇ ನಂ.2366 ದೃಢೀಕೃತ ಪ್ರತಿ

**ದಾವೆಯಲ್ಲಿ ಕೋರಿರುವಂತೆ ಆದೇಶ ಮಾಡಬೇಕೆಂದು ಕೋರುತ್ತೇನೆ.**

**ಪಾಟೀ ಸವಾಲು ಃ ಪ್ರತಿವಾದಿಯರ ಪರ ಶ್ರೀ ಎನ್ ಎಸ್ ಎಸ್ ವಕೀಲರಿಂದ**

ನನ್ನ ಜನ್ಮ ದಿನಾಂಕ ನನಗೆ ಗೊತ್ತಿರುವುದಿಲ್ಲ. ನಾನು 2 ನೇ ತರಗತಿಯ ವರೆಗೆ ಓದಿರುತ್ತೇನೆ. ನನ್ನ ಶಾಲಾ ದಾಖಲಾತಿಯನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ಸಾಕ್ಷಿದಾರರು ದಾಖಲೆಗಳನ್ನು ನೋಡಿ ನಿಪಿ-15 ನ್ನು ಹಾಜರು ಪಡಿಸಿರುತ್ತೇನೆ ಎಂದು ಹೇಳುತ್ತಾರೆ. ನಾನು ಕಮತಗಿಯಲ್ಲಿ ಶಾಲೆಯನ್ನು ಕಲೆತಿರುತ್ತೇನೆ. ನಿಪಿ-15 ದಾಖಲೆಯಲ್ಲಿ ಸಿದ್ದವ್ವ ಎಂದು ಹೆಸರು ನಮೂದು ಇರುತ್ತದೆ ಎಂದರೆ ಸಾಕ್ಷಿದಾರರು ನನ್ನ ಗಂಡನ ಮನೆಯಲ್ಲಿ ನನಗೆ ಶಾಂತಾ ಎಂದು ಕರೆಯುತ್ತಿದ್ದು ಮತ್ತು ತವರು ಮನೆಯಲ್ಲಿ ಸಿದ್ದವ್ವ ಎಂದು ಕರೆಯುತ್ತಾರೆ ಎಂದು ಹೇಳುತ್ತಾರೆ. ನಿಪಿ-15 ದಾಖಲೆಯಲ್ಲಿ ನನ್ನ ತಂದೆಯ ಹೆಸರು ಹನಮಂತಪ್ಪ ಎಂದು ಇರುತ್ತದೆ ಎಂದರೆ ಸರಿ. ನಾನು

ಸಲ್ಲಿಸಿದ ವಾದ ಪತ್ರದಲ್ಲಿ ಹನಮಪ್ಪ ಎಂದು ಇರುತ್ತದೆ ಎಂದರೆ ಸರಿ. ಹನಮಂತಪ್ಪ ಮತ್ತು ಹನಮಪ್ಪ ಈ ಎರಡು ಹೆಸರುಗಳು ಬೇರೆ ಬೇರೆ ಇರುತ್ತವೆ ಎಂದರೆ ಸರಿ. ನನ್ನ ತಾಯಿಯ ಹೆಸರು ಹನಮವ್ವ. ನಾನು ಒಂದು ವರ್ಷದವಳು ಇದ್ದಾಗ ನನ್ನ ತಾಯಿ ಹನಮವ್ವ ತೀರಿಕೊಂಡಿರುತ್ತಾರೆ. ನನ್ನ ತಾಯಿಯ ಮರಣ ಪ್ರಮಾಣ ಪತ್ರವನ್ನು ಹಾಜರು ಪಡಿಸಿರುವುದಿಲ್ಲ. ಹನಮಪ್ಪ ರವರು ನನ್ನ ತಾಯಿ ಹನಮವ್ವ ರವರನ್ನು ಮದುವೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹನಮಂತಪ್ಪನ ಮಗಳು ಎಂದರೆ ಸರಿ. ನನ್ನ ಮದುವೆ ಆಗಿ 45 ವರ್ಷಗಳು ಆಗಿರಬಹುದು. ನಾನು ಪ್ರತಿವಾದಿಯರಿಗೆ ಸಂಬಂದ ಇರುತ್ತೇನೆ ಎಂದು ತೋರಿಸಲು ಆಧಾರ ಕಾರ್ಡ ಅಥವಾ ಗುರುತಿನ ಚೀಟಿ ಅಥವಾ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ಹನಮಪ್ಪ ರವರು ಚಂದ್ರವ್ವ ರವರನ್ನು ಮದುವೆ ಮಾಡಿಕೊಂಡಿರುತ್ತಾರೆ ಮತ್ತು ಚಂದ್ರವ್ವ ರವರು ಈಗ ಜೀವಂತ ಇರುತ್ತಾರೆ ಎಂದರೆ ಸರಿ. ಹನಮಪ್ಪ ರವರು ಚಂದ್ರವ್ವ ರವರನ್ನು ಯಾವಾಗ ಮದುವೆ ಮಾಡಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಹನಮಪ್ಪ ರವರು ಚಂದ್ರವ್ವ ರವರ ದಾಂಪತ್ಯ ಜೀವನದಿಂದ ಹುಚ್ಚಪ್ಪ ಎನ್ನುವ ಒಬ್ಬನೇ ಮಗ ಜನಿಸಿರುತ್ತಾನೆ. ಹುಚ್ಚಪ್ಪ ನನ್ನು ಹೊರತುಪಡಿಸಿ ಹನಮಪ್ಪ ರವರು ಚಂದ್ರವ್ವ ರವರಿಗೆ ಯಾವುದೇ ಮಕ್ಕಳು ಇರುವುದಿಲ್ಲ. ಚಂದ್ರವ್ವ ರವರನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿ. ನಮ್ಮ ತಂದೆಯ ಆಸ್ತಿಯನ್ನು ಹುಚ್ಚಪ್ಪರವರು ಲಕ್ಷ್ಮೀಬಾಯಿ ಯವರ ಹೆಸರಿಗೆ ಮಾಡಿದ್ದರಿಂದ ಲಕ್ಷ್ಮೀಬಾಯಿಯವರನ್ನು ಈ ದಾವೆಯಲ್ಲಿ ಸೇರಿಸಿರುತ್ತೇನೆ. ಬಸವರಾಜ ಮತ್ತು ವಿಠಲ ರವರು ಆಸ್ತಿಯನ್ನು ಬರೆಸಿಕೊಂಡಿದ್ದರಿಂದ ಅವರನ್ನು ಈ ದಾವೆಯಲ್ಲಿ ಸೇರಿಸಿರುತ್ತೇನೆ. ಆದರೆ, ಯಾವ ಆಸ್ತಿ ಎಂದು ನನಗೆ ಗೊತ್ತಿರುವುದಿಲ್ಲ. ಹನಮಪ್ಪ ರವರ ಹೆಸರಿಗೆ ಇದ್ದ ಆಸ್ತಿಗಳು ಹುಚ್ಚಪ್ಪ ರವರಿಗೆ ಆಗಿದ್ದು ನಂತರ 3 ರಿಂದ 5 ನೇ ಪ್ರತಿವಾದಿಯರಿಗೆ ಆಗಿರುತ್ತವೆ ಎಂದರೆ ಸರಿ. ಹನಮಪ್ಪ ರವರ ಹೆಸರಿಗೆ ಇದ್ದ ಆಸ್ತಿಗಳು ಹುಚ್ಚಪ್ಪ ರವರಿಗೆ ಯಾವಾಗ ಆಗಿರುತ್ತವೆ ಎಂದು ನನಗೆ ಗೊತ್ತಿರುವುದಿಲ್ಲ. ಹುಚ್ಚಪ್ಪ ರವರು ಆಸ್ತಿಗಳನ್ನು 3 ರಿಂದ 5 ನೇ ಪ್ರತಿವಾದಿಯರಿಗೆ ಯಾವಾಗ ಮಾಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಹನಮಪ್ಪ ರವರ ಹೆಸರಿಗೆ ಇದ್ದ ಆಸ್ತಿಗಳು ಎಷ್ಟು ಇರುತ್ತವೆ ಮತ್ತು ಅವುಗಳ ಸರ್ವೆ ನಂಬರ ಹೇಳಲು ಬರುವುದಿಲ್ಲ. ಹನಮಪ್ಪ ರವರ ಹೆಸರಿನಲ್ಲಿ ಒಟ್ಟು 20 ಎಕರೆ ಜಮೀನು ಇತ್ತು. ನನನ ಮದುವೆಯಾದ 10 ರಿಂದ 15 ವರ್ಷಗಳ ನಂತರ ಹನಮಪ್ಪ ರವರ ಹೆಸರಿನಲ್ಲಿ 20 ಎಕರೆ ಜಮೀನು ಇದೆ ಎಂದು ತಿಳಿದಿರುತ್ತದೆ. ನನಗೆ ಅವರ ಹೆಸರಿನಲ್ಲಿ ಆಸ್ತಿ ಇದೆ ಎಂದು ಗೊತ್ತಾದ ನಂತರ

ಹನಮಪ್ಪ ಅಥವಾ ಹುಚ್ಚಪ್ಪ ಅಥವಾ ಅವರ ಹೆಂಡತಿ ಮಕ್ಕಳಿಗೆ ನನಗೆ ಪಾಲು ಕೊಡಿ ಎಂದು ಕೇಳಿರುವುದಿಲ್ಲ. ಸಾಕ್ಷಿದಾರರು ಮುಂದುವರೆದು ಈಗ ನನ್ನ ಪಾಲು ಬೇಕೆಂದು ದಾವೆ ಮಾಡಿರುತ್ತೇನೆ ಎಂದು ಹೇಳುತ್ತಾರೆ. ನನ್ನ ಮಕ್ಕಳು ದೊಡ್ಡವರಾಗಲಿ ಎಂದು ಈಗ 30 ವರ್ಷಗಳ ಹಿಂದೆ ಪಾಲು ಕೇಳುವುದನ್ನು ಬಿಟ್ಟಿದ್ದೇನು. ದಾವಾ ಆಸ್ತಿಗಳು ಹನಮಂತಪ್ಪ ರವರಿಗೆ ಸೇರಿರುವುದಿಲ್ಲ ಮತ್ತು ಹನಮಪ್ಪ ರವರಿಗೆ ಸೇರಿದ್ದು ಮತ್ತು ನಾನು ಉದ್ದೇಶಪೂರ್ವಕವಾಗಿ ಪ್ರತಿವಾದಿಯರಿಗೆ ತೊಂದರೆ ಕೊಡಬೇಕು ಎನ್ನುವ ಉದ್ದೇಶದಿಂದ ಈ ದಾವೆಯನ್ನು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ತಲಾಟಿಯನ್ನು ಕೇಳಿದಾಗ ಆಸ್ತಿಗಳು 3 ರಿಂದ 5 ನೇ ಪ್ರತಿವಾದಿಯರ ಹೆಸರಿನಲ್ಲಿ ಇರುತ್ತವೆ ಎಂದು ಮಾಹಿತಿ ನೀಡಿರುತ್ತಾರೆ. ತಲಾಟಿಯನ್ನು ಕೇಳುವ ಮೊದಲು ನನಗೆ ಯಾವ ಯಾವ ಆಸ್ತಿಗಳು ಯಾರ ಹೆಸರಿನಲ್ಲಿ ಇರುತ್ತವೆ ಎಂದು ಸ್ವಲ್ಪ ಮಾತ್ರ ಗೊತ್ತಿತ್ತು ಮತ್ತು ತಲಾಟಿಯವರನ್ನು ಕೇಳಿದ ನಂತರ ಪೂರ್ತಿಯಾಗಿ ಮಾಹಿತಿ ತಿಳಿದಿರುತ್ತದೆ. ತಲಾಟಿಯವರು ಹೇಳಿದ ಹಾಗೆ ನಾನು ಆಯಾ ಕಚೇರಿಗಳಿಗೆ ಹೋಗಿ ದಾಖಲೆಗಳನ್ನು ತೆಗೆಸಿರುತ್ತೇನೆ. ಪ್ರತಿವಾದಿಯರ ಹೆಸರುಗಳು ದಾವಾ ಆಸ್ತಿಗಳಲ್ಲಿ ಹೇಗೆ ಬಂದಿರುತ್ತವೆ ಎಂದು ನನಗೆ ಯಾರು ಮಾಹಿತಿಯನ್ನು ನೀಡಿರುವುದಿಲ್ಲ. ದಾವಾ ಆಸ್ತಿಗಳ ಕಬ್ಜಾದಲ್ಲಿ ಈಗಲೂ ಕೂಡ ಪ್ರತಿವಾದಿಯರು ಇರುತ್ತಾರೆ ಮತ್ತು ಅವರು ಸಾಗುವಳಿಯನ್ನು ಮಾಡುತ್ತಾರೆ ಎಂದರೆ ಸರಿ. ನಾನು ಮದುವೆಯಾಗಿ 45 ವರ್ಷಗಳಿಂದ ನನ್ನ ಗಂಡನ ಮನೆಯಲ್ಲಿ ಇರುತ್ತೇನೆ. ನಾನು 5 ರಿಂದ 6 ವರ್ಷಗಳ ಹಿಂದೆ ಹುಚ್ಚಪ್ಪ ರವರಿಗೆ ನನ್ನ ತಂದೆ ಹನಮಪ್ಪ ಇದ್ದು ನನಗೂ ಕೂಡ ಆಸ್ತಿಗಳಲ್ಲಿ ಪಾಲು ಕೊಡಿ ಕೇಳಿರುತ್ತೇನೆ. ನಾನು ಹಾಜರು ಪಡಿಸಿರುವ ನಿಪಿ-1 ರಿಂದ ನಿಪಿ-4 ಮತ್ತು ನಿಪಿ-6 ರಿಂದ 16 ದಾಖಲೆಗಳು ಮೂಲ ದಾಖಲೆಗಳು ಎಂದರೆ ಸರಿ. ನನ್ನ ವಾದ ಪತ್ರದಲ್ಲಿ ಖೊಟ್ಟಿ ದಾಖಲೆಗಳನ್ನು ಸೃಷ್ಟಿ ಮಾಡಿರುತ್ತಾರೆ ಎಂದು ನಮೂದಿಸಿರುವುದಿಲ್ಲ. ಅವುಗಳಲ್ಲಿ ಇರುವ ಡ ಉತಾರೆಗಳು ಮೂಲ ದಾಖಲೆಗಳು ಎಂದರೆ ಸರಿ. ಹನಮಪ್ಪ ರವರ ಮಗ ಹುಚ್ಚಪ್ಪ ಆಗಿರುವುದರಿಂದ ಎಲ್ಲ ಆಸ್ತಿಗಳು ಅವರ ಹೆಸರಿಗೆ ಬಂದಿರುತ್ತವೆ ಎಂದರೆ ಸರಿ. ಸಾಕ್ಷಿದಾರರು ಮುಂದುವರೆದು ಹೆಣ್ಣುಮಕ್ಕಳ ಹೆಸರಿಗೆ ಮಾಡಬಾರದು ಎಂದು ಹುಚ್ಚಪ್ಪ ರವರ ಹೆಸರಿನಲ್ಲಿ ಮಾಡಿರುತ್ತಾರೆ ಎಂದು ಹೇಳುತ್ತಾರೆ. ಹೆಣ್ಣು ಮಕ್ಕಳು ಎಂದರೆ ಹನಮಪ್ಪ ರವರ ಹೆಂಡತಿ ಚಂದ್ರವ್ವ ಎಂದರೆ ಸರಿ. ಹುಚ್ಚಪ್ಪ ರವರಿಗೆ ವಯಸ್ಸು ಆಗಿದ್ದರಿಂದ ತನ್ನ ಹೆಂಡತಿ ಮತ್ತು ಮಕ್ಕಳ ಹೆಸರಿಗೆ ಆಸ್ತಿಗಳನ್ನು ಮಾಡಿರುತ್ತಾನೆ ಎಂದರೆ ಸರಿ. ಡ ನಂ.840 ಇದು ಯಾವ ಆಸ್ತಿಗೆ ಸಂಬಂದಪಟ್ಟಂತೆ ಇರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಡ

ನಂ.840 ನ್ನು ನಾನು ಓದಿರುವುದಿಲ್ಲ. ಸರ್ವೇ ನಂ.53/1 ಕಮತಗಿಯಲ್ಲಿ ಇರುತ್ತದೆ. ಸರ್ವೆ ನಂ. 53/1 ಮೊದಲು ಹನಮಪ್ಪ ರವರ ಹೆಸರಿನಲ್ಲಿ ಇತ್ತು. ಸರ್ವೆ ನಂ. 53/1 ಹನಮಪ್ಪ ರವರ ಹೆಸರಿನಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಡ ನಂ. 1800 ನ್ನು ನಾನು ಓದಿರುವುದಿಲ್ಲ. ಇದು ಯಾವ ಆಸ್ತಿಗೆ ಸಂಬಂದಪಟ್ಟಂತೆ ಇರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಡ ನಂ.1795 ಇದು ಯಾವ ವಿಷಯಕ್ಕೆ ಸಂಬಂದಪಟ್ಟಂತೆ ಇರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ನಿಪಿ 18 ರಿಂದ 23 ದಾಖಲೆಗಳಲ್ಲಿ ಏನು ವಿಷಯ ಇರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದಿರುವ ಕೆಲವು ಸಂಗತಿಗಳು ನನಗೆ ಗೊತ್ತಿರುತ್ತವೆ ಮತ್ತು ಕೆಲವು ಸಂಗತಿಗಳು ಗೊತ್ತಿರುವುದಿಲ್ಲ. ರಾಮಕೃಷ್ಣ ಭೂತಲ ರವರು ನಮ್ಮ ಪಕ್ಕದ ಮನೆಯವರು ಮತ್ತು ಅವರು ನನ್ನ ಸಂಬಂಧಿಕರಲ್ಲ ಮತ್ತು ಅವರು ಈಗ ಮೃತರಾಗಿರುತ್ತಾರೆ. ಸರ್ವೆ ನಂ.171 ಇದು ಕಮತಗಿಯಲ್ಲಿದ್ದು ಅದು ಮೂಲತಃ ಎಷ್ಟು ಎಕರೆ ಇತ್ತು ಎಂದು ನನಗೆ ಗೊತ್ತಿರುವುದಿಲ್ಲ. ಸರ್ವೆ ನಂ. 171 ನ್ನು ನನ್ನ ಅಜ್ಜ ಖರೀದಿ ಮಾಡಿ ತನ್ನ ಮಗನ ಹೆಸರಿಗೆ ಹಚ್ಚಿರುತ್ತಾನೆ. ಸರ್ವೆ ನಂ.171 ನ್ನು ಹನಮಪ್ಪ ಮತ್ತು ರಾಮಕೃಷ್ಣ ಭೂತಲ ರವರು ಇಬ್ಬರೂ ಸೇರಿ ಖರೀದಿ ಹಿಡಿದಿರುತ್ತಾರೆ ಎಂದರೆ ಸರಿ. ಸರ್ವೆ ನಂ.171 ನ್ನು ಹನಮಪ್ಪ ಮತ್ತು ರಾಮಕೃಷ್ಣ ಭೂತಲ ರವರು ತಾವು ಗಳಿಸಿದ ಆಸ್ತಿಯಿಂದ ಖರೀದಿ ಹಿಡಿದಿದ್ದು ನಂತರ ಅವರಿಬ್ಬರು ತಮ್ಮ ತಮ್ಮ ಪಾಲನ್ನು ತೆಗೆದುಕೊಂಡಿರುತ್ತಾರೆ ಎಂದರೆ ಸಾಕ್ಷಿದಾರರು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ನಿಪಿ-19 ರ ಪ್ರಕಾರ ಹನಮಪ್ಪ ಮತ್ತು ರಾಮಕೃಷ್ಣ ಭೂತಲ ರವರು ಅದರಲ್ಲಿ ಒಬ್ಬರು 7 ಎಕರೆ 11 ಗುಂಟೆ ಮತ್ತು ಇನ್ನೊಬ್ಬರು 6 ಎಕರೆ 19 ಗುಂಟೆ ಕ್ಷೇತ್ರವನ್ನು ತೆಗೆದುಕೊಂಡಿರುತ್ತಾರೆ ಎಂದು ನಮೂದಿಸಿರುತ್ತದೆ ಎಂದರೆ ಸರಿ. ಸರ್ವೆ ನಂ.171 ಇದು ಸ್ವಯಾರ್ಜಿತ ಆಸ್ತಿ ಆಗಿದ್ದು, ಅದು ಪಿತ್ರಾರ್ಜಿತ ಆಸ್ತಿ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ.171 ಒಟ್ಟು 7 ಎಕರೆ 11 ಗುಂಟೆ ಇದ್ದು ಈಗ ಯಾರ ಯಾರ ಹೆಸರಿನಲ್ಲಿ ಎಷ್ಟು ಎಕರೆ ಇರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಸರ್ವೆ ನಂ.118 ಇದು ಎಷ್ಟು ಎಕರೆ ಇರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ ಮತ್ತು ಅದು ಯಾರಿಗೆ ಹೋಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಸರ್ವೆ ನಂ.118 ರಲ್ಲಿ 2 ಪಟ್ಟಿಗಳನ್ನಾಗಿ ಮಾಡಿ ಅದರಲ್ಲಿ 2 ಎಕರೆ 39 ಗುಂಟೆ ಹನಮಪ್ಪ ರವರಿಗೆ ಮತ್ತು 2 ಎಕರೆ 38 ಗುಂಟೆ ಮಲ್ಲಪ್ಪ ರವರಿಗೆ ಹೋಗಬೇಕು ಎಂದು ಅಪಸಾತ ವಾಟ್ನಿ ಅಗಿದ್ದು ಇರುತ್ತದೆ ಎಂದು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನಮೂದಿಸಿದ್ದು ನನಗೆ ಈ ಕುರಿತು

ಗೊತ್ತಿರುವುದಿಲ್ಲ.

ಮುಂದು ವರೆದ ಪಾಟೀ ಸವಾಲಿಗೆ ಸಮಯ ಕೋರಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿದೆ)

ಓ. ಹೇ. ಕೇ. ಸರಿ ಅದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಹುನಗುಂದ.